# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ.ವಿ.ಅ(ಘತ್ಯಾನಿ)/ಪಿಆರ್/ 2 /16-17

ವಿಶೇಷ ಆಯುಕ್ತರವರ ಕಛೇರಿ
ಘನತ್ಯಾಜ್ಯ ನಿರ್ವಹಣೆ
ಬಿಬಿಎಂಪಿ ಕೇಂದ್ರ ಕಛೇರಿ ಆವರಣ
ಬೆಂಗಳೂರು, ದಿನಾಂಕ:05-04-2016.

## <u>ಸುತ್ತೋಲೆ</u>

ವಿಷಯ: ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ನಿರ್ದೇಶಿತ ಪ್ರದೇಶಗಳಿಗೆ ಸಾಗಿಸದೇ ಇರುವ ಕುರಿತು.

ಉಲ್ಲೇಖ: (1) ಮಾನ್ಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ:ವಿಆ(ಘತ್ಯಾನಿ)/ಪಿಆರ್/20/ 2015-16 ದಿನಾಂಕ: 08-02-2016.

(2) ಮಾನ್ಯ ಆಯುಕ್ತರವರ ಕಛೇರಿ ಆದೇಶದ ಸಂಖ್ಯೆ:ವಿಆ(ಘತ್ಯಾನಿ)/ಪಿಆರ್/20/ 2015-16, ದಿನಾಂಕ:24-03-2016.

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಗೃಹ ಅಪಾಯಕಾರಿ ತ್ಯಾಜ್ಯ (ಸ್ಯಾನಿಟರಿ ತ್ಯಾಜ್ಯ) ಮತ್ತು ಮಿಶ್ರಿತ ತ್ಯಾಜ್ಯವನ್ನು ವಿಲೇವಾರಿ ಮಾಡಲು ವಲಯ ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿ ವಲಯವಾರು ವಿವಿಧ ಬಗೆಯ ತ್ಯಾಜ್ಯದ ಪ್ರಮಾಣವನ್ನು ಸಂಸ್ಕರಣ ಘಟಕಗಳ ಸಾಮರ್ಥ್ಯಾನುಸಾರ ಹಂಚಿಕೆ ಮಾಡಲಾಗಿರುತ್ತದೆ. ಆದಾಗ್ಯೂ ಸಹ ತ್ಯಾಜ್ಯವು ನಿಗದಿತ ಪ್ರಮಾಣದಲ್ಲಿ ಘಟಕಗಳಿಗೆ ಸಾಗಾಣಿಕೆಯಾಗದಿರುವುದು ಕಂಡುಬರುತ್ತಿದೆ. ಇದಲ್ಲದೇ ವಲಯ ಮಟ್ಟದಲ್ಲಿ ಬೇರೆ ಬೇರೆ ಘಟಕಗಳಿಗೆ ತ್ಯಾಜ್ಯ ಸಾಗಾಣಿಕೆಯ ಕುರಿತಂತೆ ವಲಯ ಮಟ್ಟದಲ್ಲಿ ತ್ಯಾಜ್ಯವನ್ನು ಸ್ವೀಕರಿಸದೇ ಇರಲು, ವರ್ಗಾಯಿಸುತ್ತಿರುವುದು, ಹಾಗೂ ಹೆಚ್ಚುವರಿ ತ್ಯಾಜ್ಯವನ್ನು ಸ್ವೀಕರಿಸುತ್ತಿರುವ ಹಲವು ಕ್ರಮಗಳು ಜರುಗುತ್ತಿರುವುದು ತಿಳಿದುಬಂದಿರುತ್ತದೆ. ಇದರಿಂದ ತ್ಯಾಜ್ಯ ಸಾಗಾಣಿಕೆಯಲ್ಲಿ ಏರುಪೇರುಗಳು ಉಂಟಾಗುತ್ತಿದ್ದು, ಘಟಕಗಳ ನಿರ್ವಹಣೆ ಮತ್ತು ನಗರದ ಸ್ವಚ್ಚತೆ ಮೇಲೆ ಪರಿಣಾಮ ಉಂಟಾಗುತ್ತಿರುತ್ತದೆ.

ಈ ಹಿನ್ನೆಲೆಯಲ್ಲಿ ತ್ಯಾಜ್ಯ ಸಾಗಾಣಿಕೆಗೆ ಕೇಂದ್ರ ಕಚೇರಿಯಿಂದ ಹೊರಡಿಸಲಾದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುತ್ತದೆ. ಇದಲ್ಲದೇ ಯಾವುದೇ ಬದಲಾವಣೆಗಳ ಅವಶ್ಯಕತೆಯಿದ್ದಲ್ಲಿ ಕೇಂದ್ರ ಕಛೇರಿಯಿಂದ ಲಿಖಿತ ರೂಪದಲ್ಲಿ ಆದೇಶ ಪಡೆದು ಕ್ರಮವಹಿಸಲು ಸೂಚಿಸಲಾಗಿದೆ.

5.4.16

ವಿಶೇಷ ಆಯುಕ್ತರು
(ಆರೋಗ್ಯ ಮತ್ತು ಘತ್ಯಾನಿ)

**<u>ಪ್ರತಿಯನ್ನು:-</u>**

1. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘತ್ಯಾನಿ) ಕ್ರಮಕ್ಕಾಗಿ.
3. ಪ್ರಧಾನ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು (ಘತ್ಯಾನಿ) ಮಾಹಿತಿ ಹಾಗೂ ಕ್ರಮಕ್ಕಾಗಿ.
4. ಪಾಲಿಕೆಯ ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಸೂಕ್ತಕ್ರಮಕ್ಕಾಗಿ.
5. ಪಾಲಿಕೆಯ ಎಲ್ಲಾ ವಲಯದ ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರುಗಳಿಗೆ ಕ್ರಮಕ್ಕಾಗಿ